ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 1, March-April 2023, Pp. 194-197
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಪು.ತಿ.ನರಸಿಂಹಾಚಾರ್ ಅವರ 'ನಾ ನನ್ನ ದೇವರೆತ್ತರ' : ತಾತ್ವಿಕ ಚರ್ಚೆ

**ಪ್ರಮೋದ್ ಕೆ. ಬಿ**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

***Abstract:***
*'ಜಿಜ್ಞಾಸು ಕವಿ' ಎಂತಲೇ ಖ್ಯಾತರಾದ ಪು.ತಿ.ನ ಅವರು 'ಭಕ್ತ ಕವಿ' ಎಂತಲೂ ಕರೆಯಿಸಿಕೊಂಡವರು. ಕವಿ ತಮ್ಮ 'ನಾ ನನ್ನ ದೇವರೆತ್ತರ' ಕವಿತೆಯಲ್ಲಿ ದೇವರ ಒಡನಾಟ, ಸಾಮೀಪ್ಯಗಳನ್ನು ಮುಂದು ಮಾಡಿ ದೇವರಿಗೆ ಹತ್ತಿರವಾಗಬೇಕೆಂಬ ಅಭೀಪ್ಸೆಯನ್ನು ಹೊರಹಾಕಿದ್ದಾರೆ. ಅನುಕಂಪ, ನೇಹದ ಬಿತ್ತರ ಚಿತ್ತದಿಂದ 'ನಾ ನನ್ನ ದೇವರೆತ್ತರ' ಎಂದು ಹೇಳುವ ಕವಿಯ ಮಾತುಗಳು ದೇವರ ಒಲುಮೆಯ ಸ್ನೇಹಕ್ಕಾಗಿ ತುಡಿಯುತ್ತಿರುವ ಭಾವಕ್ಕೆ ಸಾಕ್ಷಿಯಂತಿವೆ.*

***Keywords:*** *ಕನ್ನಡ ಸಾಹಿತ್ಯ, ಪುತಿನ, ನಾ ನನ್ನ ದೇವರೆತ್ತರ, ಭಾರತೀಯ ಪರಂಪರೆ, ದೇವರು.*

## ಪ್ರಸ್ತಾವನೆ

ಪು.ತಿ.ನ ಸಂಪ್ರದಾಯನಿಷ್ಠವಾದ ದೇಗುಲಗಳ ಪರಿಸರದಲ್ಲಿ ಬೆಳೆದವರು. ಮೇಲುಕೋಟೆಯ ವಾತಾವರಣವಂತು ಅವರನ್ನು ಆಪ್ತವಾಗಿ ಪ್ರಭಾವಿಸಿದೆ. "ಮೇಲುಕೋಟೆ ಇವೆರಡಕ್ಕೂ ತೀರ ಬೇರೆಯಾದ ಊರು; ಶ್ರೀ ವೈಷ್ಣವರು ನಿತ್ಯ ಸ್ಮರಿಸುವ ಪುಣ್ಯಕ್ಷೇತ್ರ; ಸಾಂಸ್ಕೃತಿಕ ರಾಜಧಾನಿ. ಎಲ್ಲ ವರ್ಗದ ಜನ ಅದರ ಅಂದಕ್ಕೆ ಮೆಚ್ಚಿಕೊಂಡು ಆದರಿಸುತ್ತಿರುವ ಯಾತ್ರಾ ಕ್ಷೇತ್ರವದು. ದೈವವಶಾತ್ ಒಂದು ದೊಡ್ಡ ಉತ್ಸವದ ದಿನ ನಾನಲ್ಲಿ ಜನಿಸಿದೆ. ದೈವದ ಒಂದು ಗಾಢವೂ ಆನಂದ ಸಮೃದ್ಧವೂ ಆದ ಭಾವ ಮೊದಲ ಉಸಿರಿನಲ್ಲಿಯೇ ಆ ದಿನ ನನ್ನನ್ನು ಹೊಕ್ಕು ನನ್ನ ಇಡೀ ಬದುಕನ್ನು ವ್ಯಾಪಿಸಿತು. ಬೆಟ್ಟ, ಕಣಿವೆಗಳು, ಕೆರೆ, ತೊರೆ, ಪುಷ್ಕರಿಣಿ ದೇಗುಲಗಳ ಬಹುಸುಂದರವಾದ ಊರು ಮೇಲುಕೋಟೆ. ಅಲ್ಲಿನ ಪಾಠಶಾಲೆಯಲ್ಲಿ ಕಾವ್ಯರಸವನ್ನೂ, ಗುಡಿಯಲ್ಲಿ ಆರ್ಯ ದ್ರಾವಿಡ ದ್ವೈತಭಾವಗಳ ರಸವನ್ನೂ, ಪುರಾಣ ಹಾಗೂ ಕಾಲಕ್ಷೇಪ ಸನ್ನಿವೇಶಗಳಲ್ಲಿ ಕಥಾರಸ ಪ್ರವಚನ ರಸಗಳನ್ನೂ, ದೇವೋತ್ಸವಗಳಲ್ಲಿ ಗಾನ ಮತ್ತು ಇತರ ಕಲಾರಸಗಳನ್ನು, ಮಾಧ್ಯಮಿಕ ಕನ್ನಡ ಶಾಲೆಯಲ್ಲಿ ಕನ್ನಡ ಗದ್ಯ–ಪದ್ಯಗಳ ರುಚಿಯನ್ನೂ ನಾನು ಪಡೆದುಕೊಂಡೆ. ನನ್ನ ಪ್ರಪಂಚದ ರಸವತ್ತಾದ ಭಾಗ ನನಗೆ ಮೇಲುಕೋಟೆಯ ಕೊಡಿಗೆ."[1] ಅವರ ಮಾತುಗಳಿಂದಲೇ ಅವರ ಕಾವ್ಯ ಶಕ್ತಿಯನ್ನು, ಸತ್ವವನ್ನು ಪ್ರೇರೇಪಿಸಿರುವ ಶಕ್ತಿಯ ಅರಿವುಂಟಾಗುತ್ತದೆ.

*"ನಾ ನನ್ನ ದೇವರೆತ್ತರ*
*ನನ್ನ ಮರುಕವೇ ನನ್ನ ಬಿತ್ತರ*
*'ನೀನಾರ್' ಎನೆ ನನ್ನೊಳಿಲ್ಲ ಉತ್ತರ*
*ನೀನೆಣಿಸಿದಂತೆ ನನ್ನ ಚಿತ್ತರ*

[1] ಪು.ತಿ.ನ. ಸಮಗ್ರ ಕಾವ್ಯ. ಮೆಲುಕು ಭಾಗದಿಂದ., ಪು.4

***Please cite this article a:*** ಪ್ರಮೋದ್ ಕೆ. ಬಿ. (2023). ಪು.ತಿ.ನರಸಿಂಹಾಚಾರ್ ಅವರ 'ನಾ ನನ್ನ ದೇವರೆತ್ತರ' : ತಾತ್ವಿಕ ಚರ್ಚೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 2(1), 194–197.

*ನನಗು ನಿನಗು ಇರುವಂತರ*
*ನಮ್ಮ ತಿಳಿವಿಲಿತನದ ಬೆಂತರ*
*ಅದ ತೊಲಗಿಸಲಿಹುದೊಂದು ತಂತರ*
*ನಾ ನಿನ್ನವನೆಂಬ ಮಂತರ*

*ನಾ ನನ್ನ ದೇವರೆತ್ತರ*
*ನನ್ನ ನೇಹವೇ ನನ್ನ ಬಿತ್ತರ*
*ನೀ ನಾರೆನೆ ನನ್ನೊಳಿಲ್ಲ ಉತ್ತರ*
*ನೀ ನೆಣಿಸಿದಂತೆ ನನ್ನ ಚಿತ್ತರ"*[2]

ಪು.ತಿನ ರವರ ಕಾವ್ಯವನ್ನು ಅವಲೋಕಿಸಿದಾಗ ಭಾರತೀಯ ಪರಂಪರೆ ಮತ್ತು ಸಂಪ್ರದಾಯಗಳ ಬಗೆಗೆ ಕವಿಗೆ ಅತೀವವಾದ ಶ್ರದ್ಧೆ ಮತ್ತು ಭಕ್ತಿಯಿದೆ. ಇವುಗಳನ್ನು ಅತ್ಯಂತ ತೀವ್ರವಾಗಿ ಉಸಿರಾಗಿ ಸಿಕೊಂಡು ಬರೆದ ಪೂರ್ವಸೂರಿಗಳ ಬಗೆಗೂ ಒಂದು ಗೌರವದ ಸ್ಥಾನವಿದೆ. ಪು.ತಿ.ನ ಅವರ ಕಾವ್ಯ ಜಗತ್ತೂ ಈ ರೀತಿಯ ಹೊದಿಕೆಯನ್ನೇ ಹೊದ್ದು ಬೆಳೆದಿದೆ, ಬೆಳಗಿದೆ. "ಮಾನವನ ವೈಚಾರಿಕ ಬುದ್ಧಿ ಇಲ್ಲಿ ಮುಗ್ಗರಿಸುತ್ತದೆ ನಿಜ. ಸಹಜವೂ ಹೌದು. ಸಂವೇದನೆಗಳು ಅದನ್ನು ತಬ್ಬಿಬ್ಬಾಗಿಸುತ್ತವೆ. ಅಲ್ಲಿನವು ಆತ್ಮೋದ್ಬೋದಕ ವಸ್ತು ಕ್ರಿಯೆಗಳು ಇವುಗಳು ಋಷಿಪ್ರೋಕ್ತ ಇಲ್ಲವೆ ಸಂಪ್ರದಾಯದತ್ತ ಅವುಗಳನ್ನು ಪ್ರಶ್ನಿಸುವ ಹಾಗಿಲ್ಲ. ಪ್ರಶ್ನಿಸುವ ಮನಸ್ಸಿಗೆ ಅಲ್ಲಿ ಪ್ರವೇಶವಿಲ್ಲ."[3] ಎಂದು ಅಭಿಪ್ರಾಯಪಡುವ ಪು.ತಿ.ನ ಸಹಜವಾಗಿಯೇ ದೇಗುಲ, ದೇವರು ಎನ್ನುವ ಕಲ್ಪನೆಯನ್ನು ಮಹೋನ್ನತವಾಗಿ ಕಾಣಲು ಸಾಧ್ಯವಾಗಿದೆ.

ಪು.ತಿ.ನ ಅವರ ಧಾರ್ಮಿಕ ಶ್ರದ್ಧೆ ಶ್ರೀ ರಾಮಾನುಜಾಚಾರ್ಯರ 'ವಿಶಿಷ್ಠಾದ್ವೈತ ಸಿದ್ಧಾಂತ' ದಿಂದಲೂ ಪ್ರಭಾವಗೊಂಡಿದೆ. ದೇಗುಲಗಳಲ್ಲಿ ಪ್ರಜ್ಞಾಪೂರ್ವಕ ಶಾಸ್ತ್ರೋಕ್ತ ವಿಧಿ ವಿಧಾನಗಳಲ್ಲಿ ಪ್ರತಿಷ್ಠಾಪಿಸುವ ದೇವರ ಮೂರ್ತಿ ಕೇವಲ ಕಲ್ಲು ಮಾತ್ರವೇ ಆಗಿರದೆ ಶ್ರೀ ವಿಷ್ಣುವಿನ ಅವತಾರವೇ ಎಂಬುದು ಈ ಸಿದ್ಧಾಂತದ ನಂಬಿಕೆ. ಭಕ್ತನೊಬ್ಬನಿಗೆ ಮೋಕ್ಷದ ಪ್ರಾಪ್ತಿಯ ಮಿಂಚು ಸುಳಿಯುವುದೇ ದೇಗುಲದ ದಿವ್ಯ ಪ್ರಾಂಗಣದಲ್ಲಿ ಮುಂತಾಗಿ ರಾಮಾನುಜರ ಸಿದ್ಧಾಂತದಲ್ಲಿ ದೇಗುಲಕ್ಕೆ ವಿಶೇಷ ಮಹತ್ವ ಪ್ರಾಪ್ತವಾಗಿದೆ. ಆದ್ದರಿಂದಲೇ ಪು.ತಿ.ನ 'ದೇಗುಲ' ಪರಿಕಲ್ಪನೆಯ ಸುತ್ತ ಅನೇಕ ಮಹತ್ವದ ಕವಿತೆಗಳನ್ನು ರಚಿಸಲು ಸಾಧ್ಯವಾಗಿದೆ. ಉದಾಹರಣೆಗೆ 'ಮಲೆದೇಗುಲ' ದಂತಹ ಕವಿತೆಯಲ್ಲಿ ಕವಿಯು ಶರಣಾಗತಿಯ ಭಾವದಿಂದ ಭಕ್ತಿಯಿಂದ ಶಿರಬಾಗುವ ಸಂದರ್ಭವನ್ನು ಕಾಣಬಹುದು.

"ಪು.ತಿ.ನ ಅವರಿಗೆ ನಿಸರ್ಗೋಪಾಸನೆಯಲ್ಲಿ ನಂಬಿಕೆಯಿರುವಂತೆ ವಿಗ್ರಹರಾಧನೆಯಲ್ಲೂ ಅಪಾರ ವಿಶ್ವಾಸವಿದೆ. ಒಮ್ಮೆ ವಿಗ್ರಹದ ಸ್ಥಾಪನೆಯಾಯಿತೆಂದರೆ ಸಾಕು. ಅದರಲ್ಲಿ ದೈವಶಕ್ತಿಯಿದೆಯೆಂದು ಭಾವಿಸಬೇಕು ಎನ್ನುತ್ತಾರೆ. ಪು.ತಿ.ನ ಈ ವಿಗ್ರಹವನ್ನು ಕೆತ್ತಿದವನು ರೂವಾರಿಯಾದರೂ ಕೆತ್ತಿ ಆದ ಮೇಲೆ ಅದು ಮೂರ್ತಿಯಾಗುತ್ತದೆ. ಈ ದೈವಕ್ಕೆ ಖಚಿತವಾದ ರೂಪವಿದೆ. ಆದ್ದರಿಂದ ಅದು ಹೇಗೆ ಬೇಕಾದರೂ ರೂಪಧಾರಣೆ ಮಾಡಬಲ್ಲ ಬಯಲಲ್ಲ. ಈ ವಿಗ್ರಹವು ಮನುಷ್ಯ ತನ್ನ ಯಾತನೆಯ ಸಂದರ್ಭದಲ್ಲಿ ರೂಪಿಸಿಕೊಂಡ ಪ್ರೀತಿಯ ಪ್ರತಿರೂಪ ಮಾತ್ರ ಎಂದು ಕವಿ ಒಪ್ಪುವುದಿಲ್ಲ ಅಥವಾ ಅದು ನ್ಯಾಯಧರ್ಮಗಳನ್ನು ನಿರ್ದೇಶಿಸುವ ಧರ್ಮಾಧಿಕಾರಿ ವಿಧಿ ಎಂದೂ ಹೇಳುವುದಿಲ್ಲ. ಅದೊಂದು ಅದ್ಭುತ ಚೈತನ್ಯದ ಸತ್ವ. ಈ ಅರ್ಚಾ ರೂಪದ ದೈವಶಕ್ತಿ ನಮ್ಮ ನಿಲುವನ್ನು ಶಿವಮಯವಾಗಿ ಸ್ಥಾನಾಂತರಗೊಳಿಸುತ್ತದೆ. ಜಡದಿಂದ ಜೀವಕ್ಕೆ, ಹಾಗೆಯೇ ಜೀವದಿಂದ ಆತ್ಮಕ್ಕೆ, ಆತ್ಮದಿಂದ ರಸಸ್ಥಿತಿಗೆ ನಮ್ಮ ಬದುಕನ್ನು ಸೆಳೆಯುವ ರಾಸಾಯನಿಕ ಶಕ್ತಿ ಅದಕ್ಕಿದೆ ಇದನ್ನು ಪು.ತಿ.ನ 'ಚೇತನಾಯಸ್ಕಾಂತ ಜಾನಪದ ಹೃಚ್ಛಕ್ತಿ' ಎಂದು ಹೇಳುತ್ತಾರೆ. ಅಂದರೆ ಸಮಷ್ಟಿ ಜನತೆಯ ಇಚ್ಛಾರೂಪವಾದ ಅಭೀಪ್ಸೆಯ ಶಕ್ತಿ. ಅದಕ್ಕೆ ಎಲ್ಲಾ ಚೇತನಗಳನ್ನು ತನ್ನ ಕಡೆಗೆ ಸೂಜಿಗಲ್ಲಿನಂತೆ ಸೆಳೆಯುವ ಸಾಮರ್ಥ್ಯವಿರುತ್ತದೆ. ಇಂಥ ಚೈತನ್ಯದ

[2] ಪು.ತಿ.ನ. ಸಮಗ್ರ ಕಾವ್ಯ. ಪು.489
[3] ಪು.ತಿ.ನ. ರಸಪ್ರಜ್ಞೆ, ಪು.36

ರಸತತ್ತ್ವವನ್ನು ನಂಬಿದರೆ ಆದರಿಸಿದರೆ, ಆರಾಧಿಸಿದರೆ ನಮ್ಮ ಜೀವ ನಿಶ್ಚಯವಾಗಿ ಬಿಡುಗಡೆಯನ್ನು ಪಡೆಯುತ್ತದೆ ಎಂದು ಅವರು ಸಾರುತ್ತಾರೆ."[4] ವಾಸ್ತವ ಜಗತ್ತಿನಲ್ಲಿಯೇ ವಿಹರಿಸಿ ಸತ್ಯ ಅರಸುವ ನಮ್ಮ ಬೌದ್ಧಿಕ ಸತ್ಯವು ಮಿತಿಯುಳ್ಳದ್ದು ಆದುದರಿಂದ ಅಂತರಂಗ ಅಶಾಂತಿಯಿಂದ ಬಳಲುತ್ತದೆ. ದೇವಾಲಯ ಇಂತಹ ಅಶಾಂತಿಯ ರೋಗಗಳಿಗೆ ಔಷಧ ಎಂದು ಕವಿ ಹೇಳುತ್ತಾರೆ. ಪು.ತಿ.ನ ಅವರು ದೇವಾಲಯ ಅಥವಾ ದೇವರ ಸನ್ನಿಧಾನ ಕೇಂದ್ರಕ್ಕೆ ನೀಡುವ ಮಹತ್ವವನ್ನು ನೋಡಿದರೆ ಅದರ ಸ್ಪಷ್ಟ ಅನುಭವ ಗಾಢವಾದಂತೆ ಅನಿಸುತ್ತದೆ. "ಅವರು ದೇವಾಲಯವನ್ನು ಅದರ ವರ್ತಮಾನ ಸ್ಥಿತಿಯಲ್ಲಿ ಮಾತ್ರವಲ್ಲ, ಆ ಪರಿಕಲ್ಪನೆಯ ಐತಿಹಾಸಿಕ ತಾತ್ವಿಕ ಆಯಾಮಗಳಲ್ಲಿ ನೋಡುತ್ತಾರೆ. ಎಂದರೆ ದೇಗುಲವೆಂಬ ಜಡವಸ್ತುಕೋಶದ ಸುತ್ತ ಕಟ್ಟಿಕೊಂಡಿರುವ ರೇಶಿಮೆ ಎಳೆಗಳೆಲ್ಲ ಅನುಭವದ ವ್ಯಾಪ್ತಿಯನ್ನು ಸೇರಿ ಹೋಗುತ್ತವೆ. ಜನಸಾಮಾನ್ಯರನ್ನು ಇಂಥದೊಂದು ಭಾವಸ್ಥಿತಿಗೆ ಕರೆದೊಯ್ಯಬಲ್ಲ ಶಕ್ತಿ ದೇಗುಲಕ್ಕೆ ಇದೆಯೆಂದು ನಂಬಿರುವ ಈ ಕವಿಗೆ ಆಗುವ ಸ್ವಂತ ಅನುಭವದ ಗಾಢತೆ ಸ್ಪಷ್ಟ"[5] ಎಂದೇ ತೋರುತ್ತದೆ.

ಪು.ತಿ.ನ ಅವರನ್ನು ಬಾಲ್ಯದಿಂದಲೂ ಪ್ರಭಾವಿಸಿರುವ ಆರಾಧ್ಯ ದೈವ ಶ್ರೀ ಕೃಷ್ಣ ಚೆಲುವ ನಾರಾಯಣನ ದಿವ್ಯ ಪ್ರಭೆ ಅವರನ್ನು ಬೆಳಗುತ್ತಾ ಕಾವ್ಯವಾಗಿಸುತ್ತಾ ಬಂದಿದೆ. ಇದನ್ನು ಅವರೂ ಸ್ಪಷ್ಟಪಡಿಸಿದ್ದಾರೆ ಕೂಡ. ಅದರೊಡನೆ ನಿರ್ವೇದದಿಂದ ಸಿದ್ಧಿಸುವ ಪರಮಶಾಂತ ಸ್ವಭಾವ–ದಿವ್ಯ ನಿರ್ಲಿಪ್ತತೆ; ಜೀವಕಾಯದಲ್ಲಿ ಜಿಜ್ಞಾಸೆ, ಅವರ ಮನಸ್ಸು ಶಿವನನ್ನು ಧ್ಯಾನಿಸುವಂತೆ ಪ್ರೇರೆಪಿಸುತ್ತದೆ. ಈ ಶಿವನ ಸ್ವರೂಪವನ್ನು ಕವಿ ಸೌಂದರ್ಯ ತತ್ವದ ಪ್ರತಿಮೆಯಾಗಿ ಭಾವಿಸುತ್ತಾರೆ ಆದ್ದರಿಂದಲೆ ನಟರಾಜನ ದಿವ್ಯ ಸ್ವರೂಪ ಬಹುಕಾಲದಿಂದಲೂ ಅವರ ಧ್ಯಾನದ ವಸ್ತುವಾಗಿತ್ತು. ತಾವು ನಂಬಿದ್ದ ಸಿದ್ಧಾಂತನುಸಾರ ಜಗತ್ತನ್ನು ಜಗನ್ಮೂಲಾನಂದನ ಸೃಷ್ಟಿ ಎಂದೇ ನಂಬಿರುವ ಕವಿ ಮೊದಲು ಆತನನ್ನು ಪರಿಭಾವಿಸಿ ಅನಂತರ ಶಾಬ್ದಿಕ ಕಲ್ಪದಲ್ಲಿ ಅಭಿವ್ಯಕ್ತಗೊಳಿಸಲು ತುಡಿಯುತ್ತಾರೆ. ಹೀಗಾಗಿಯೇ ಪ್ರಕೃತಿಯಲ್ಲಿರುವ ಚೇತನ ಅವರನ್ನು ವಿಶೇಷವಾಗಿ ಕಾಡಿದೆ. "ಪ್ರಕೃತಿ ಪರಮನ ಪ್ರೇಯಸಿ, ಮಾನವ ಜೀವ ಪರಮನ ಕೌಸ್ತುಭಮಣಿ, ಅಂತೆಯೇ ನಿಸರ್ಗದ ಚೆಲುವು ಆತನ ಪ್ರೀತಿಗಾಗಿ, ಜೀವನ ಉದ್ದೇಶ ಆತನ ಪ್ರಸನ್ನತೆಗಾಗಿ ಇನ್ನು ಆ ಪರಮ ವಸ್ತುವೂ ಪರಮ ಸೌಲಭ್ಯದಿಂದ ಮಾನವನ ಬಳಿಗೆ ಅಂತಃಕರಣದಿಂದ ಇಳಿದು ಬರುತ್ತದೆ. ತನ್ನ ದಿವ್ಯತೆಯ ಅನುಭವವನ್ನು ಹಲವು ಹತ್ತು ಬಗೆಯಲ್ಲಿ ಜೀವನ ಅನುಭವಕ್ಕೆ ತಂದುಕೊಡುತ್ತದೆ. ಈ ಅನುಭವದಿಂದ ಪುಳಕಿತವಾದ ಜೀವ ಮತ್ತೆ ಮತ್ತೆ ಅಂತಹ ದಿವ್ಯಾನುಭವಕ್ಕೆ ಹಾತೊರೆಯುತ್ತದೆ."[6]

ವೈದಿಕ ಆಚರಣೆಗಳಲ್ಲಿ ಶ್ರದ್ಧೆ, ನಿಷ್ಠೆ, ದೇವರು, ದೇಗುಲ, ವಿಗ್ರಹಾರಾಧನೆ, ಭಕ್ತಿ ಭಾವಕ್ಕೆ ಪ್ರಾಧಾನ್ಯತೆ ಕೊಡುವ ಈ ಕವಿ ಪರಮಾತ್ಮನ ಒಂದೊಂದು ಲೀಲೆಯೂ ಅವನ ಸುಂದರ ರೂಪದ ನಾನಾ ಅಭಿವ್ಯಕ್ತಿಯಾಗಿ ಪ್ರಕೃತಿ ರಮಣೀಯತೆಯನ್ನು ವರ್ಣಿಸುತ್ತದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಪು.ತಿ.ನ ಪ್ರಕೃತಿಯಲ್ಲಿ ದೇವರನ್ನು ಕಂಡಿದ್ದಾರೆಯೆ? ಎಂದು ಅವಲೋಕಿಸುವುದಾದರೆ "ಪುತಿನ ಅವರು ಪ್ರಕೃತಿಯು ದೇವರ ಸ್ವರೂಪವೆಂಬ ತೀರ್ಮಾನಕ್ಕೂ ಎಲ್ಲಿಯೂ ಬರುವುದಿಲ್ಲ. ಅವರ ಆಧ್ಯಾತ್ಮಿಕ ತಹತಹಗಳೆನಿದ್ದರೂ ಅವರು ನಿಷ್ಠಾವಂತ ಆಸ್ತಿಕರಾದರೂ 'ಪ್ರಕೃತಿ ದೈವೀಕರಣ' ದತ್ತ ಅವರ ಮನಸ್ಸು ಒಲಿಯುವುದಿಲ್ಲ."[7] ಎಂಬ ಅಭಿಪ್ರಾಯ

---

[4] ಮಿತ್ರ ಅ.ರಾ. ಯದುಗಿರಿಯ ಬೆಳಕು. ಪು.105

[5] ರಾಘವೇಂದ್ರರಾವ್ ಎಚ್.ಎಸ್. ಹಾಡೇ ಹಾದಿಯ ತೋರಿತು. ಪು.208

[6] ವೇಣುಗೋಪಾಲ್ ರಾವ್ ಎ.ಎಸ್. ಪು.ತಿ.ನ ಕಾವ್ಯ: ಒಂದು ಅಭ್ಯಾಸ. ಪು.176

[7] ಅದೇ. ಪು.163

ವನ್ನು ಕವಿಯು ಕಾವ್ಯದಲ್ಲಿ ವ್ಯಕ್ತಗೊಳಿಸಿದ ಅಂಶಗಳ ಹಿನ್ನೆಲೆಯಿಂದ ಅವಲೋಕಿಸಿದರೆ ಒಪ್ಪಬಹುದಾಗಿದೆ. ಎಷ್ಟೋ ಬಾರಿ ಪು.ತಿ.ನ ಅವರು ಚಿತ್ರಿಸುವ 'ಪ್ರಕೃತಿ' ಯಲ್ಲಿ ಪ್ರಕೃತಿಯೇ ದೇವರೆಂಬತೆ ಭಾವಿಸಿದ್ದಾರೆ ಎಂದು ಅನಿಸಿದರೂ "ಕವಿಯು ಪ್ರಕೃತಿಯ ಬಗ್ಗೆ ತೋರಿಸುವ ಅಪಾರ ಪ್ರೀತಿ–ಗೌರವಗಳು 'ಆತ್ಮ' ದ ಮಾರ್ಗದರ್ಶನ ನೀಡಬಲ್ಲ ಅದರ ಸಾಮರ್ಥ್ಯಕ್ಕಾಗಿಯೇ ವಿನಃ ಪ್ರಕೃತಿಯೇ ದೇವರೆಂದು ತಿಳಿಯುವ ನೆಲೆಯಿಂದ ಅಲ್ಲ."[8] ಎಂಬ ಎಚ್. ಎಸ್. ರಾಘವೇಂದ್ರರಾವ್ ಅವರ ಅಭಿಪ್ರಾಯವನ್ನು ಒಪ್ಪಬಹುದಾಗಿದೆ. ಆ ಮೂಲಕ ಪು.ತಿ.ನ ಅವರ ದೇವರ ಪರಿಕಲ್ಪನೆಯ ಸ್ವರೂಪವನ್ನು ಸರಿಯಾಗಿ ಬಿಂಬಿಸಲು ಇಂಬು ನೀಡುವಂತಿದೆ.

ಹೀಗೆ ಪು.ತಿ.ನ ಅವರ ಕಾವ್ಯದಲ್ಲಿ 'ದೇವರು' ಲೀಲಾಜಾಲವಾಗಿ ಮೂಡಿ ಬಂದಿದ್ದಾನೆ. ಪರಂಪರೆಯೊಳಗೆ ಸ್ಥಾಪಿತವಾದ ಸಾಂಸ್ಥಿಕ 'ದೈವ ಕಲ್ಪನೆ' ಉದಾರವಾಗಿ ಮೈದಳೆದಿದೆ. ಚೆಲುವ ನಾರಾಯಣನ ಭಕ್ತರೂ ಅಗಿರುವ ಕವಿ, ತಾನು ಕಂಡುಂಡ ಅನುಭವಗಳನ್ನು ಕಾವ್ಯವಾಗಿಸಿದ್ದಾರೆ. ಜಗತ್ತು ಮತ್ತು ಜಗತ್ತನ್ನು ನೋಡಿ ತಣಿಸುವ ಮನಸ್ಸುಗಳೆರಡು 'ವಿಶ್ವಾತ್ಮನ ನಿರ್ಹೇತುಕ ಕರುಣೆ' ಎಂಬುದಾಗಿಯೇ ಪು.ತಿ.ನ ಕಂಡುಕೊಂಡ ದೇವರ ಗ್ರಹಿಕೆಯಾಗಿದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಮಿತ್ರ ಅ.ರಾ. (1998). *ಯದುಗಿರಿಯ ಬೆಳಕು.* ಎಸ್.ಬಿ.ಎಸ್ ಪ್ರಕಾಶನ.
- ಪು.ತಿ.ನ. (2004). *ಸಮಗ್ರ ಕಾವ್ಯ.* ಡಾ.ಪು.ತಿ.ನ ಟ್ರಸ್ಟ್ (ರಿ)
- ಪು.ತಿ.ನ. (2000). *ರಸಪ್ರಜ್ಞೆ.* ಡಾ.ಪು.ತಿ.ನ ಟ್ರಸ್ಟ್ (ರಿ).
- ರಾಘವೇಂದ್ರರಾವ್ ಎಚ್.ಎಸ್. (1995). *ಹಾಡೇ ಹಾದಿಯ ತೋರಿತು.* ಕನ್ನಡ ಸಂಘ ಕ್ರೈಸ್ಟ್ ಯೂನಿವರ್ಸಿಟಿ.
- ವೇಣುಗೋಪಾಲ್ ರಾವ್ ಎ.ಎಸ್. (2002). *ಪು.ತಿ.ನ ಕಾವ್ಯ : ಒಂದು ಅಭ್ಯಾಸ.* ಲಕ್ಷ್ಮಿ ಮುದ್ರಣಾಲಯ.


[8] ಅದೇ., ಪು.163